

ಹೀಗೇ ಚರ್ಚೆನೂ ಆಯ್ತು. ಬಾಬುರಾಯ್ರು 'ನಾವೀಗ ಮತ್ತೂ ಅತಂತ್ರಸ್ಥಿತಿ ತಲುಪಿದೀವಿ ಭವಾನಿ....'! ಅವಳಿಗೆ ಗಂಡನ ಸೈದ್ಧಾಂತಿಕ ನಿಲುವೆಂದರೆ ಈಗೀಗ ಅಲರ್ಜಿಗೆ ಆದುತ್ತಿದೆ.

'ನೋಡಿ... ಮಗ ಸೊಸೆ ಇಲ್ಲೋ ಎಲ್ಲೋ ಒಂದ್ಕಡೆ ಛಲೋ ಇದ್ರಾತು... ಒಬ್ಳು ಮಗ್ಳು ಜ್ಯೋತಿ... ಇನ್ನೊಂದ್ ಮಗು...? ಆ ದೇವ್ರೇ ಕಣ್ಣುಬಿಡ್ಬೇಕು... ನಮ್ದು ಕಾಲ ಮುಗೀತಾ ಬಂತು... ಆನೆ ಹೊಕ್ಕಿಯಾಯ್ತು... ಬಾಲ ಒಂದ್ ಉಳ್ಕಂಡದೆ... ಅದು ನುಗ್ಗದೇ ಇರ್ತದ್ಯಾ?.... ಜಲ್ದಿ ಸ್ನಾನ ಮುಗ್ಸಿ ಮೂರ್ನಾಲ್ಕು ಸಾಮಾನು ತರ್ಬೇಕು.... ಹೋಗ್ಬನ್ನಿ ಮಾತು ಸಾಕು...' ಬಾಬುರಾಯರು ತೆಪ್ಪಗಾದರು.

ಬಾಬುರಾಯರು ಮಾರ್ಕಟ್ಟೆ ಬಜಾರ್‌ಗೆ ಹೋಗಿದ್ದರು. ಭವಾನಿ ಹತ್ತಿರದ ಹನ್ಮಂತ ದೇವರ ಗುಡಿಗೆ ತಿಂಗ್ಳ ನಂತ್ರ ಅವತ್ತೇ ಹೋಗಿದ್ದಳು. ಮನೆಗೆ ಬಂದು ನೋಡಿದರೇನು!?; ಹಿಂಬದಿ ಬಾಗಿಲು ಮುರಿದು ನುಗ್ಗಿದ ಕಳ್ಳರು ಅಲ್ಮೈರಾ ಒಡೆದು ಭವಾನಿಯ ಚೂರು ಪಾರು ಬಂಗಾರದೊಡವೆ ಎಲ್ಲ ದೋಚಿಕೊಂಡು ಹೋಗಿದ್ದಾರೆ! ಬಾಬುರಾಯ್ರು ಬ್ಯಾಂಕ್‌ನಿಂದ ಡ್ರಾ ಮಾಡಿ ನಿನ್ನೆಯಷ್ಟೇ ತಂದಿದ್ದ 10 ಸಾವಿರ ರೂಪಾಯಿ ತಮ್ಮ ಹಳೇ ಮೇಜಿನ ಡ್ರಾದಲ್ಲಿ ಹಳೇ ನ್ಯೂಸ್ ಪೇಪರ್‌ನಲ್ಲಿ ಸುತ್ತಿಟ್ಟದ್ದರಿಂದ ಅದು ಬಚಾವ್! ಪಾತ್ರೆ ರೇಡಿಯೊ ಇಸ್ತ್ರಿ ಪೆಟ್ಟಿಗೆ ಬಟ್ಟೆಂತಾ ಮಾಯ! ಬಾಬುರಾಯರಿಗೆ ಭೂಮಿನೇ ಗಿರ್ರ್ ಆದಂತಾಯ್ತು. 'ಭವಾನಿ... ನಾವ್ಯಾರಿಗೆ ಏನನ್ಯಾಯ ಮಾಡಿದ್ವೀಂತಾ ದೇವ್ರು ನಮ್ಗೆ ಹೀಂಗೆ ಶಿಕ್ಷೆ!?' ಕೊಡ್ತಿದಾನೆ ಅನ್ನೋದು ಅದರ ಇಂಗಿತಾರ್ಥ ಇಬ್ಬರಿಗೂ ಕಣ್ಣಲ್ಲಿ ಜಲಜಳ ನೀರು.

ಮನೆಯಲ್ಲಿ ಪಾತ್ರೆ ಒಡವೆ ಕಳುವಾದ ಸುದ್ದಿ ಬಾಬುರಾಯ್ರು ಮಗ ಸೊಸೆಗೆ ತಿಳಿಸಲೇ ಇಲ್ಲ. 'ಸುಧಾಕರಂಗೆ ತಿಳಿಸಿದ್ರಾ?'; ಭವಾನಿಯ ಪ್ರಶ್ನೆಗೆ ಗಂಡ ತಲೆಯಾಡಿಸಿದ್ದು ಹೌದೆಂತಾ ಸುಳ್ಳೇ! 'ಮನೆ ಮಗ ಎರ್ಡೂ ಒಡೆದ್ಹಾಕಿದ ಮಗ ಸೊಸೆ ಹತ್ರ ಇನ್ನೆಂಥಾ ಕಷ್ಟ ಅಂದ್ಕೊಳ್ಳೋದು!' ಬಾಬುರಾಯರ ಇಂಥ ತರ್ಕದಲ್ಲಿ ಒಂದು ವರ್ಷ ಉರುಳ್ಹೋಯ್ತು. ಮಗ ಸೊಸೆ ಹೊಸ ಮನೆಗೆ ಬಾ ಅನ್ನಲಿಲ್ಲ! ಇವ್ರು ಬರಲಾಂತ ಕೇಳಲಿಲ್ಲ! ಅಮಾವಾಸ್ಯೆಗೊಮ್ಮೆ ಹುಣ್ಣಿಮೆಗೊಮ್ಮೆ ತಪ್ಪಿದರೆ ಗ್ರಹಣಕ್ಕೊಮ್ಮೆ ರಾಗ ಎಳೀತಾ 'ಛಲೋ ಇದೀರಲ್ವಾ?' ಅಂತಾ ಸುಧಾಕರ ಮೊಬೈಲ್‌ನಲ್ಲಿ ಪ್ರಶ್ನೆ ಬಿಟ್ಟರೆ ಮತ್ತೆಲ್ಲ ಶೂನ್ಯ!

ಈಗ ಮಾಲತಿ ಎರಡನೇ ಬಾರಿಗೆ ಆರ್ನೆ ತಿಂಗಳ ಗರ್ಭಿಣಿ. ಈ ಸಲ ಅಂದರೆ 8 ವರ್ಷದ ನಂತರದ ಬಸಿರು. ಗಂಡ್ಮಗು ಕರುಣಿಸ್ಕೊಡಪ್ಪಾಂತ ಅವ್ಳು ಭಯ ಭಕ್ತೀಲಿ ಗೋವಾ ಮಹಾಲಕ್ಷ್ಮಿಗೆ ಹರಕೆ ಹೊತ್ತಿದ್ದಾಳೆ. ಅವಳ ಸೂಚನೆಯ ಮೇರೆಗೆ ಸಿಹಿ ಸುದ್ದಿ ಮುಖತಃ ಹೇಳಿ ತಾಯ್ತಂದೆಗೆ ಅತ್ಯಾಶ್ಚರ್ಯ ಮೂಡಿಸ ಬೇಕೆಂಬ ಹುಚ್ಚಿನ ಕೆಚ್ಚೆಲ್ಲೆಂಬಂತೆ ಈಗ ಸ್ವತಃ ಕಾರು ಕೊಂಡಿದ್ದನಲ್ಲ. ಅದರಲ್ಲೇ ಅವರಿವರಲ್ಲಿ ಬಾಬುರಾವ್‌ರ ವಿಳಾಸ ಕೇಳಿಕೊಂಡು ಸುಧಾಕರ ಹೆಂಡತಿ ಜ್ಯೋತಿಯೊಡನೆ ಅವತ್ತು ಹೊರಟಿದ್ದು ಒಂದ್ ಥರಾ ಮಯೂರ ನರ್ತನದ ಖುಷಿಯಲ್ಲೇ!

ಅಲ್ಲಿ ಕಾರು ನಿಲ್ಲಿಸಿದ ಮಾಲತಿ, ಮಗಳು ಇಳಿದ ನಂತ್ರ ಕಾರಿಗೆ ಲಾಕ್ ಮಾಡಿದ್ದೇ ಗತ್ತಿನಲ್ಲಿ ಅಪ್ಪಾಮ್ಮ ಇದ್ದ ಆ ಬಾಡಿಗೆ ಮನೆಯತ್ತ ಬಂದು ನಿಂತ. ನೋಡಿದರೇನು? 430ನೇ ನಂಬರ್‌ನ ಆ ಮನೆಗೆ ಅರ್‍ರೇ ಬೇರೆ ಯಾರೋ ಬಂದಿದ್ದಾರೆ! ಸುಧಾಕರ ಅಚ್ಚರಿ ಹಾಗೂ ಆತಂಕದಲ್ಲಿ ವಿಳಾಸ ಹೇಳಿದ. ಆ ಮನೆಯಲ್ಲಿದ್ದ ಗೃಹಿಣಿ ಇಷ್ಟು ದಪ್ಪ ಹಣೆಯಲ್ಲಿ ಕುಂಕುಮ ಇಟ್ಟುಕೊಂಡ ಧಡೂತಿ ಶರೀರದವ್ಳು. ಕಿಸ್ಸೊಮ್ಮೆ ನಕ್ಕು, 'ನೀವ್ಯಾರೋ ಗೊತ್ತಿಲ್ಲ'! ಅಂದಿದ್ದಕ್ಕೆ, ಸುಧಾಕರ ತಾವು ಇಂಥಾವ್ರೂಂದ. ಆಕೆಯ ಮತ್ತೆ ತೋಡಿ ರಾಗ ಎಳೆದಂತೆ. 'ಅಯ್ಯೋ ರಾಯ್ರೇ... ನಿಮ್ ಬಾಬಣ್ಣೋರು ಈ ಮನೆ ಬಿಟ್ಹೋಗಿ ಆರೆಂಟು ತಿಂಗ್ಳಾಯ್ತು. ಎಲ್ಲೋದ್ರು ಸಮ ಹೇಳ್ಲಿಲ್ಲ. ಒಂದ್ಸಲ ಮಗ್ನ ಮನೆಗೇಂದ್ರಂತೆ.... ಇನ್ನೊಂದ್ಸಲ ಕೊಲ್ಲಾಪುರ್ದಲ್ಲಿ ನಾಸಿಕ್‌ನಲ್ಲಿ ಒಂದು ಅನಾಥಾಶ್ರಮದಲ್ಲಿ ಉಳ್ಕೊತೀವಿ ಅಂದ್ರಂತೆ... ಅಲ್ಲಾರಿ ಅವ್ರು ನಮ್ಗೆ ಅಡ್ರಸ್ ಕೊಟ್ಟಿದ್ರಲ್ವ.... ತಿಳಿಯೋದು!?... ಊರಲ್ಲೇ ಇದ್ದ ಮಗ ನಿಮ್ಗೆ... ಹೇಳ್ಲಿಲ್ಲ... ಇಂಥಾ ಕಡೇಂತಾ ಏನ್ ಜನ್ರಪ್ಪಾ!? ಅಂದಾಗ ಮಾಲತಿ, ಸುಧಾಕರ ಪ್ರದರ್ಶಿಸಿದ್ದ ಮೌನವೇ ಇಲ್ಲಾಂತ ಸಾಬೀತುಪಡಿಸ್ತು.

'ಮತ್ತೆ ಮುಂದಿನ ಎರಡೇ ನಿಮಿಷ್ದಲ್ಲಿ ಮನೆಗೆ ಬಂದ ಸುಧಾಕರ ಪೂನಾಕ್ಕೆ ಫೋನ್ ಮಾಡಿ ಅಪ್ಪಾಮ್ಮ ನಮ್ಗೆ ಹೇಳ್ದೆ ಕೇಳ್ದೆ ಎಲ್ಲೋ ಹೊರ್ಟೋಗಿದಾರ ಕಣೇ... ಅಲ್ಲಿಗೆ ಬಂದಿದಾರಾ!?' ಅಂದಾಕ್ಷಣ, ರಜನಿ ಗಾಬರಿಯ ದನೀಲ್ಲಿ, 'ಅಯ್ಯೋ ರಾಮ... ಅಪ್ಪ ಏನ್ಹೇಳಿದ್ರೂ ಅಮ್ಮ ಹೇಂಗೆ ಒಪ್ಕೊಂಡ್ ಊರು ಬಿಟ್ಹೋದ್ರೂಂತ ಏನಾರಾ ಪ್ಲಾನ್ ಮಾಡಿ ಹುಡುಕ್ಬೇಕು ಕಣೋ... ಮರ್ಯಾದೆ ಪ್ರಶ್ನೆ ಕುಟುಂಬದ್ದು ಮಾರಾಯಾ!' ಅಂದಾಕ್ಷಣ ಇತ್ತಲಿಂದ ಸುಧಾಕರನೇ 'ಇವ್ನು ನಿನ್ನತ್ತಿಗೆ ಮಾಲತಿ ಗರ್ಭಿಣಿ. ಅಪ್ಪಮ್ಮನ್ನ ಪುಸಲಾಯಿಸಿಯೋ, ದಮ್ಮಯ್ಯಂದೋ ಕಾಲು ಹಿಡ್ಕಂಡೋ ಕ್ಷಮಿಸ್ಬಿಡಿ ಅಂತ್ಹೇಳಿ ನನ್ ಹೊಸ ಮನೆಗೆ ಕರೆದೊಯ್ಯಬೇಕೂಂತ ನಾವ್ಬಂದ್ರೆ ಇಲ್ಲೋಡಿದ್ರೆ...' ಸುಧಾಕರನ ಧ್ವನೀಲ್ಲಿ ಭೀತಿ ಆತಂಕವೇ ಹೆಚ್ಚು ಥಕಧಿಂ ಮಾಡುತ್ತಿದೆ. ಫೋನ್ ಸಂಭಾಷಣೆ ನಿಷ್ಫಲವಾಯ್ತು.

ಆ ನಂತರವೂ ತನ್ನ ಅಪ್ಪಾಮ್ಮರ ಬಗ್ಗೆ ಒಂದೆರಡು ಕಡೆ ಚೌಕಾಶಿ ಮಾಡಿದ ಶಾಸ್ತ್ರ ಮುಗಿಸಿದ ಸುಧಾಕರಗೆ ಮಾಲತಿ ಹೊಸ ಹೊಸ ದಾರಿ ತೋರಿಸಿದಳು. ವಾರದೊಳ್ಗೇ ಪುಣೆಯಿಂದ ಸುಧಾಕರನಿಗೆ ಸಂಪರ್ಕವಿದ್ದ ರಜನಿ ಹಿಗ್ಗಿನ ಸ್ವರದಲ್ಲಿ, 'ಅವತ್ತೇ ಹೇಳ್ಬೇಕೂಂತಿದ್ದ ಮಾರಾಯಾ... ಆಗ್ಲಿಲ್ಲ.... ಖರೇಗ್ಲೂ ಖುಷಿಯ ವಿಷ್ಯ ಗೊತ್ತಾ?' ಅಂದಾಗ ಈ ತಂಗಿ ಎಲ್ಲೋ ವೃದ್ಧಾ ಅಪ್ಪಮ್ಮನ್ನ ಪತ್ತೆ ಮಾಡಿ ಆ ಸುದ್ದಿ ಅನ್ನಿದಾಳಿರ್ಬೇಕೂಂತಾ ಸುಧಾಕರ ಕಲ್ಪಿಸಿಕೊಂಡರೆ ಅದೂ ಸುಳ್ಳಾಗಿದೆ! ಅವಳೇ 'ನಿನ್ ಭಾವಂಗೆ.... ನಾಸಿಕ್‌ನ ಫ್ಯಾಕ್ಟ್ರಿಗೆ ಡೆಪ್ಯೂಟ್ ಮಾಡಿದಾರೆ... ಪ್ರಮೋಷನ್ ಸಿಕ್ಕಿದೆ ಕಣೋ... ಅಪ್ಪ ಹೋಗಿ ಮನೆ ನೋಡ್ಕಂಡ್ಬಂದಿದ್ರು. ಹಾಗಾಗಿ ನಾಸಿಕ್‌ಗೆ ಬಂದಿದೀವಿ... ಮನೆ ತಕ್ಕಮಟ್ಟಿಗಿದೆ.... ಕಮ್‌ಫರ್ಟೆಬಲ್... ಅದಾತು... ಅಪ್ಪಾಮ್ಮ ಎಲ್ಲಿದಾರೆ?.... ಮಾಹಿತಿ ಪತ್ತೆ ಆಯ್ತೇನೋ?'

'ಅಂದಾಗ ಸುಧಾಕರ ಇಲ್ಲಾಂದ. ವಿಳಾಸ ಕೇಳ್ದ. ರಜನಿ ಫೋನಿನಲ್ಲಿ ವಿಳಾಸ ಅಂದಳು. ಇವನು ಗೀಚಿಕೊಂಡ. 'ಸುಧಾಕರಣ್ಣ.... ಅಪ್ಪಾಮ್ಮ.... ಅಲ್ಲೇ ನಮ್ ಉತ್ತರ ಕನ್ನಡ ಜಿಲ್ಲೆ ಬಿಟ್ಟು ಹೊರ್ಗೆಲ್ಲೂ ಹೋಗಿಲ್ಲಾನ್ನಿಸ್ತದೆ... ಭಟ್ಕಳ, ಅಂಕೋಲಾ... ಕಾರವಾರ ಸಿರ್ಸೀಂತಾ ಛಲೋ ತಲಾಷ್ ಮಾಡ್ಬೋಡು' ಸಲಹೆ ಸಲೀಸಾಗಿತ್ತು. ಸುಧಾಕರ ಒಪ್ಪಿದ. ವರ್ಷದ ಮೇಲಾಯ್ತು. ತಂಗಿಗೆ ಕೊಡಬೇಕಾಗಿರೋ ಐದು ಲಕ್ಷ ರೂಪಾಯಿನ ಪ್ರಸ್ತಾಪ ಮಾತ್ರ ಅಣ್ಣಂದು ಉಹುಂ!

ಈ ರಜನಿ ಸಾಮಾನ್ಯದ ಹೆಂಗ್ಸಲ್ಲಾ. ತನ್ಮನೇಲ್ಲೇ ಗಡದ್ದಾಗಿ ಅಪ್ಪಾಮ್ಮನ್ನ ಕರೆಸಿಟ್ಕೊಂಡು ನನ್ನತ್ರ ಸುಳ್ಳೇ ಹುಡುಕಣ್ಣಾಂತ ನಾಟ್ಕ ಮಾಡ್ತಿದಾಳೆ ಹಿಕ್ಮತ್ತಿನವ್ಳು...? ಅನ್ನೋ ತೀರ್ಮಾನಕ್ಕೆ ಬಂದ ಸುಧಾಕರ ಆ ವರ್ಷದ ಕಾಲೇಜಿನ ಫೈನಲ್ ಎಕ್ಸಾಮ್ ಮುಗಿದಾಕ್ಷಣ ತನ್ನ ಪಯಣ ಫಿಕ್ಸ್ ಮಾಡಿಯೇ ಬಿಟ್ಟ! ಇತ್ತ ಮಟಮಟ ನೆತ್ತಿ ಸುಡ್ತಿರೋ ಹಾಗಿನ ಬಿಸಿಲ ಹೊತ್ನಲ್ಲಿ ತನ್ನ ಮನೆಯ ಬಾಗಿಲಲ್ಲಿ ರಿಕ್ಷಾ ಬಂದು ಗಜಕ್ಕನೆ ನಿಂತಿತು. ಸುಧಾಕರ ಇಳಿದು ಸರಸರ ಬಂದಿದ್ದು ಕಂಡ ರಜನಿಗೆ ಅತ್ಯಾಶ್ಚರ್ಯ! 'ಏನಣ್ಣಾ.... ಒಂದ್ ಸುದ್ದಿನೂ ಕೊಡ್ದೇ....' ರಜನಿ ಅಚ್ಚರಿಯ ದನಿಯಲ್ಲಂದಾಗ, 'ನಿಂಗೆ ಸರ್‌ಪ್ರೈಸ್ ಮಾಡ್ಬೇಕೂಂತಾ ಬಂದೆ'; ಅಂದ ಮನೆ ನೋಡೋ ನೆಪದಲ್ಲಿ ಮನೆ ಮಹಡಿ ನೀಟಾಗಿ ಸುತ್ತಾಡಿದರೂ ತನ್ನ ತಾಯ್ತಂದೆಯ ದರ್ಶನವಿಲ್ಲ! ಅಂದಾಗ ಸುಧಾಕರ ಸುಸ್ತೆದ್ದು ಹೋದ. ಭಾವ ಸುಧೀರ ಸಂಜೆ ಬಂದ. ಅಪ್ಪಾಮ್ಮರ ಸುದ್ದಿ ತಿಳೀಲಿಲ್ಲಪ್ಪಾ... ಪೇಪರ್ನಲ್ಲಿ ಹಾಕಿಸಿಯಾಯ್ತು. ನಿಷ್ಪ್ರಯೋಜಕವಾಯ್ತು ಅಂದ. ಸುಧೀರ ಅಂದಿದ್ದಕ್ಕೆಲ್ಲ ಹೌದಲ್ಲಾಂತ ತಲೆಯಾಡಿಸಿಬಿಟ್ಟ. ಅಷ್ಟೇ. ನಾಲ್ಕು ದಿನ ಇರ್ತೀನಿ ಅಂತದಿದ್ದ ಸುಧಾಕರ ನಿರಾಶೆ ಹೆಪ್ಪುಗಟ್ಟಿದಂತೆ ಮೂರ್ನೇ ದಿನ ಬೆಳಿಗ್ಗೆ ರೈಲು ಹತ್ತಿಬಿಟ್ಟ. ಅಂತೂ ಮನೆಗೆ ಹಿಂದಿರುಗಿದ ಸುಧೀರನ ಉತ್ಸಾಹೀ ಮುಖ ನೋಡಿ ಹಸನ್ಮುಖ ಪ್ರದರ್ಶಿಸಿದ ರಜನಿ ಗೆಲುವಿನ ದನೀಲ್ಲಿ. 'ಅಂತೂ ನನ್ ಡ್ರಾಮಾಕ್ಕೆ ನೀನ್ ಛಲೋ ಡೈರೆಕ್ಟರ್ ಕೊಟ್ರಿ' ಅಂದಳು ಅವನು ಒಪ್ಪಿಗೆಯ ನಗೆ ಚೆಲ್ಲಿದ.

ನಾಸಿಕ್‌ನಲ್ಲಿ ಟಾಗೋರ್ ನಗರದಲ್ಲಿನ ಪುಣೆ ರಸ್ತೆಯಲ್ಲಿ, ಸುಧೀರನ ಮನೆಯಿಂದ ಬರೋಬರಿ 2 ಕಿಮೀ. ದೂರದಲ್ಲಿ ನೈರುತ್ಯದಲ್ಲಿ 'ಶಾಂತಿ ಸದನ' ಅನ್ನೊ ಹೆಸರಿನ ಅನಾಥಾಶ್ರಮ ಒಂದಿದೆ.

ಸದ್ಯಕ್ಕಂತೂ ಗುಟ್ಟು ಬಿಚ್ಚಿಡಲು ರಜನಿ ಅವಳ ಹಾಗೂ ಸುಧೀರ ನಡೆಸಿದ್ದ ಪರಿಶ್ರಮಕ್ಕೆ ಸಿಕ್ಕ ಸತ್ಫಲದ್ದೇ ಪರಮಾಶ್ಚರ್ಯದ್ದೇ ಕಥೆ ಅನ್ನುವಂತೆ ನಾಸಿಕ್‌ನ ಆ ಅನಾಥಾಶ್ರಮದಲ್ಲಿ ಮ್ಯಾನೇಜರ್ರಾಗಿ ಪತ್ನಿ ಭವಾನಿಯ ಜೊತೆ ಈಗಲೂ ಹಾಯಾಗಿದ್ದಾರೆ ಬಾಬುರಾಯರು!